**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 804/2024**

**ಪಿರ್ಯಾದುದಾರರು :** **ವಿರುದ್ಧ** **ಆರೋಪಿತರು:**

ಚನ್ನಗಿರಿ ಪೊಲೀಸ್ ಠಾಣೆ

ಎ1. ಸಿದ್ದಪ್ಪ ಬಿನ್ ಗುರುವಾಬೋವಿ
ವಯಸ್ಸುಃ 46 ವರ್ಷ
ವಾಸಃ ವಿ ರಾಮೇನಹಳ್ಳಿ ಗ್ರಾಮ, ಚನ್ನಗಿರಿ ತಾಃ

ಎ2. ಸದಾನಂದಪ್ಪ ಬಿನ್ ತಿಪ್ಪಣ್ಣ
ವಯಸ್ಸುಃ 61 ವರ್ಷ
ವಾಸಃ ವಡ್ನಾಳ್ ರಾಜಣ್ಣ ಬಡಾವಣೆ ಚನ್ನಗಿರಿ

ಎ3. ರುದ್ರಪ್ಪ ಬಿನ್ ರಂಗಪ್ಪ
ವಯಸ್ಸುಃ 58 ವರ್ಷ
ವಾಸಃ ತಿಪ್ಪಗೊಂಡನಹಳ್ಳಿ ಗ್ರಾಮ, ಚನ್ನಗಿರಿ ತಾಃ

ಎ4. ನಾಗರಾಜ ಬಿನ್ ರಂಗಪ್ಪ
ವಯಸ್ಸುಃ 46 ವರ್ಷ
ವಾಸಃ ಹೊಸಬನ್ನಿಹಟ್ಟಿ ಗ್ರಾಮ, ಚನ್ನಗಿರಿ ತಾಃ

ಎ5. ಉಮೇಶ ಬಿನ್ ಶಂಕ್ರಪ್ಪ
ವಯಸ್ಸುಃ 41 ವರ್ಷ
ವಾಸಃ ವಡ್ನಾಳ್ ರಾಜಣ್ಣ ಬಡಾವಣೆ ಚನ್ನಗಿರಿ

ಎ6. ತಿಪ್ಪೇಶ ನಾಯ್ಕ ಬಿನ್ ತೋಗನಾಯ್ಕ
ವಯಸ್ಸುಃ 62 ವರ್ಷ
ವಾಸಃ ವಡ್ನಾಳ್ ರಾಜಣ್ಣ ಬಡಾವಣೆ ಚನ್ನಗಿರಿ

**<u>ದೋಷಾರೋಪಣೆ</u>**

ಶ್ರೀಮತಿ ಮಹಾಲಕ್ಷ್ಮೀ ಜಿ 2ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ 21-05-2022 ರಂದು ಸಂಜೆ 5.00ಗಂಟೆ ಸಮಯದಲ್ಲಿ ಚನ್ನಗಿರಿ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಚಾಸಾ-1 ರವರಿಗೆ 1ನೇ ಆರೋಪಿಯಾದ ನೀನು ರಂಗಾಪುರ ಗ್ರಾಮದ ಸರ್ವೆ ನಂ 14/1 ರಲ್ಲಿನ 30 ಗುಂಟೆ ಜಮೀನನ್ನು ಕೊಡಿಸುವುದಾಗಿ ಹೇಳಿ 2 ರಿಂದ 6 ನೇ ಅರೋಪಿತರ ಸಮಕ್ಷಮ ರೂ.6,87,000/- ಹಣ ಪಡೆದು ಜಮೀನು ಕೊಡಿಸದೇ ಮೋಸ

ಮಾಡಿರುತ್ತೀರಿ ನಿಮ್ಮ ವಿರುದ್ದ ಭಾ.ದಂ.ಸಂ.ಕಲಂ 420 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 2 ರಿಂದ 6ನೇ ಅರೋಪಿತರಾದ ನೀವು ಕಮೀಷನ್ ಹಣವನ್ನಾಗಿ 50,000/-ಗಳನ್ನು ಪಡೆದಿದ್ದು ಚಾಸಾ-1 ರವರಿಗೆ ಜಮೀನ ಕೊಡಿಸದೇ ಇದ್ದಾಗ ಹಣ ವಾಪಸ್ ಕೊಡುವಂತೆ ಕೇಳಿದಾಗ ಇನ್‌ನು ರೂ.48,000/- ಸಾವಿರ ಹಣ ಕೊಟ್ಟರೆ ಜಮೀನು ಕೊಡಿಸುವುದಾಗಿ ಹೆದರಿಗೆ 48,000/- ಹಣವನ್ನು ಪಡೆದಿರುತ್ತೀರಿ ದಿಃ 01-05-203 ರಂದು ಚಾಸಾ-1 ರವರು ನಾನು ನೀಡಿ ಹಣ ವಾಪಾಸ್ ಕೋಡಿ ಅಂತ ಕೇಳಿದ್ದಕ್ಕೆ ಆರೋಪಿತರಾದ ನೀವು ಚಾಸಾ1 ರವರಿಗೆ ಚನ್ನಗಿರಿ ಟೌನ್ ನ್ಯಾಯಾಲಯದ ಅವರಣದಲ್ಲಿ ಅಡ್ಡಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈಯ್ದು ನೀನು ಹಣ ವಾಪಸ್ಸು ಕೇಳಿದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಸಾಯಿಸಿ ಬಿಡುತ್ತೇವೆ ಎಂದು ಪ್ರಾಣಬೆದರಿಕೆ ಹಾಕುವುದರ ಮೂಲಕ ಭಾ.ದಂ.ಸಂ.ಕಲಂ 341, 504, 506 ಸಹ ಕಲಂ 149 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ: 04-09-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ:804/2024**

**1. ಕರ್ನಾಟಕ ಸರ್ಕಾರ (ಚನ್ನಗಿರಿ  ಪಿ.ಎಸ್ )**

**ವಿರುದ್ಧ**

ಎ6. ತಿಪ್ಪೇಶ ನಾಯ್ಕ ಬಿನ್ ತೋಗನಾಯ್ಕ
ವಯಸ್ಸುಃ 62 ವರ್ಷ

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 04-09-2025ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 04-05-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**

**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**